**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಓಎಸ್ 156/2017</u>**

ಪಿ ಡಬ್ಲ್ಯೂ -1

**<u>ದಿನಾಂಕ 24-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ ಬಿ ಕೆಎಸ್ ವಾದಿ ಪರ ವಕೀಲರುಃ</u>**

ನಾವು ಖರೀದಿ ಮಾಡಿರುವ ಆಸ್ತಿಯಲ್ಲಿ ಯಾವ ಸರ್ವೇ ನಂಬರ ಎಂದು ನನಗೆ ಗೂತ್ತಿರುವುದಿಲ್ಲ. ಕ್ರಯ ಪತ್ರದ ದಿನಾಂಕದಂದು ಸದರಿ ಕ್ರಯ ಪತ್ರದ ನಿವೇಶನದ ಪೂರ್ವ ದಿಕ್ಕಿಗೆ ಗಿರಿಯಮ್ಮನ ಮನೆ ಇರುತ್ತದೆ ಎಂದರೆ ಸರಿ. ನಿಪಿ 2 ರಲ್ಲಿ ಸ್ವತ್ತಿನ ಸಂಖ್ಯೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 2 ರ ಪೂರ್ವ ದಿಕ್ಕಿನಲ್ಲಿ ಅಜ್ಜನಾಯಕನ ಹಿತ್ತಿಲುಮತ್ತು ಪ್ರತಿವಾದಿಯ ತಾಯಿ ಗಿರಿಯಮ್ಮನ ಮನೆ ಇರುತ್ತದೆ ಎಂದರೇ ಸರಿ.

ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ನನಗೆ ಅವರುಯಾವ ಸಂಖ್ಯೆಯ ಸ್ವತ್ತುಗಳನ್ನು ಕೊಂಡುಕೊಂಡಿದ್ದಾಗಿ ನನಗೆ ತಿಳಿಸಿರುವುದಿಲ್ಲ. ನಿಪಿ 1 ರಲ್ಲಿರುವ ಬರೆದಿರುವ ಸಂಗತಿಗಳು ಸರಿ ಇರುತ್ತವೆ. ನಮ್ಮ ತಂದೆಯವರು ನಿಪಿ 1 ಕರಯ ಪತ್ರವನ್ನು ಮಾಡಿಕೊಡುವ ಮೊದಲು ಬೋಗ್ಯವನ್ನು ಬಪಿಡುಗಡೆ ಮಾಡಿಕೊಂಡ ನಂತರ ಕ್ರಯ ಪತ್ರವನ್ನು ಮಾಡಿಕೊಂಡಿರುತ್ತಾರೆ. ಸದರಿ ಭೋಗ್ಯ ಬಿಡುಗಡೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ದಾವಾ ಷೆಡ್ಯೂಲ್ ಸ್ವತು ಎಷ್ಟು ಬೆಲೆ ಬಾಳುತ್ತದೆ ಎಂದು ನನಗೆ ಗೂತ್ತಿಲ್ಲ.

ಮಧುವನಹಳ್ಳಿ ಯಲ್ಲಿ 1 ಚದರ ಅಡಿಗೆ ರೂಪಾಯಿ 1000/- ನೋಂದಣಿ ಅಧಿಕಾರಿಗಳ ಮೌಲ್ಯ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಖರೀದಿ ಮಾಡುವ ಮೊದಲು ಪ್ರತಿವಾದಿಯವರು ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿದ್ದರು ಎಂದರೆ ಸರಿಯ್ಲ ಸಾಕ್ಷಿ ಮುಂದುವೆರದು ಖಾಲಿ ನಿವೇಶನ ಇರುತ್ತದೆ ಎಂದು ತಿಳಿಸಿರುತ್ತಾರೆ. ನಿಪಿ 1 ನ್ನು ನಮ್ಮ ತಂದೆ

ಮಂಚನಾಯಕ ಅಲಿಯಾಸ ಅಜ್ಜನಾಯಕನಿಂದ ಖರೀದಿ ಮಾಡಿರುತ್ತಾರೆ. ನಮ್ಮ ತಂದೆಗೆ ಮಾರಾಟ ಮಾಡಿದ ನಂತರ ಸದರಿ ಮಂಚನಾಯಕ ಅಲಿಯಾಸ ಅಜ್ಜನಾಯಕರವರು ಯಾವುದೇ ಜಮೀನನ್ನು ತಮಗಾಗಿ ಉಳಿಸಿಕೊಂಡಿರುವುದಿಲ್ಲ ಎಂದರೆ ನನಗ ಗೊತ್ತಿರುವುದಿಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿದ್ದು ಪಾಟೀ ಸವಾಲನ್ನು ಮುಕ್ತಾಯಗೊಳಿಸಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ